ಶ್ರೀ ಆರ್.ಶ್ರೀನಿವಾಸ್: ಆ ಯೋಜನೆಯ ಪ್ಲಾನ್‌ನಲ್ಲಿ ಏನೇನು ಇದೆಯೋ ಅದಕ್ಕೆ ಆಗತಕ್ಕಂಥ ವೆಚ್ಚವನ್ನು ನಾವು ಕೊಡುತ್ತೇವೆ. ಪೂರ್ತಿ ವೆಚ್ಚವನ್ನು ಕೊಡುವುದಕ್ಕೆ ಆಗುವುದಿಲ್ಲ. ಆ ಯೋಜನೆಯ ವೆಚ್ಚ ಜಾಸ್ತಿಯಾದರೂ ಅದನ್ನು ಭರಿಸುವ ಜವಾಬ್ದಾರಿ ನಮ್ಮದು ಇರುತ್ತದೆ. ಆದರೆ further ಏನಾದರೂ ಮಾಡಬೇಕಾದರೆ ಅದಕ್ಕೆ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಈ ರೀತಿ ಗಲಾಟೆ ಮಾಡಿದರೆ ಹೊರಗಡೆ ಕಳುಹಿಸಿ ಬಿಡುತ್ತೇನೆ ಅಷ್ಟೆ. ನನಗೂ ಸಾಕಾಗಿದೆ. ಎಲ್ಲರೂ ಕುಳಿತುಕೊಳ್ಳಿ. ಸಹಿ ಹಾಕದಿರುವವರು ಕೂಡ ಎದ್ದು ನಿಂತುಕೊಂಡು ಬಿಡುವುದು. ನನಗೆ ಕೋಪ ಹತ್ತಿಸಬೇಡಿ.

**4. ವಿಷಯ: ಹಾವೇರಿ ಜಿಲ್ಲೆಯಲ್ಲಿ ಬರುವ ಜಲ ನಿರ್ಮಲ ಯೋಜನೆ ಬಗ್ಗೆ.**

ಶ್ರೀ ಶಿವರಾಜ್ ಸಜ್ಜನರ್(ಹಾವೇರಿ): ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಜಲ ನಿರ್ಮಲ ಯೋಜನೆಯ ಅಡಿಯಲ್ಲಿ 9 ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗೆ ಟೆಂಡರ್ ಮುಗಿದಿದ್ದು, ಹಣಕಾಸಿನ ಒಪ್ಪಿಗೆ ಇಲ್ಲದಿರುವುದರಿಂದ ಯೋಜನೆಯ ಕಾರ್ಯ ಸ್ಥಗಿತಗೊಂಡಿರುವುದರ ಬಗ್ಗೆ ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಹಿಂದಿನ ವಾರ ಉಪ ಮುಖ್ಯಮಂತ್ರಿಗಳು ಮತ್ತು ಹಾವೇರಿ ಜಿಲ್ಲೆಯ ಮಂತ್ರಿಯಾಗಿರುವ ಉದಾಸಿಯವರನ್ನು ಹಾಗೂ ಎಲ್ಲಾ ಶಾಸಕರನ್ನು ಕರೆದು ಎಲ್ಲಾ ಯೋಜನೆಗಳಿಗೆ ಹೆಚ್ಚಿನ ಹಣ ಆದರೂ ಸಹ ಕೊಡುವುದಕ್ಕೆ ತೀರ್ಮಾನವನ್ನು ತೆಗೆದುಕೊಂಡಿರುತ್ತೇವೆ. ಅದಕ್ಕೆ ಇವರೆಲ್ಲರೂ ಬಂದಿದ್ದಾರೆ. ಎಲ್ಲಾ ರೀತಿಯ ಒಪ್ಪಿಗೆಯನ್ನು ಕೊಟ್ಟಿದ್ದೇವೆ.

ಹಾವೇರಿ ಜಿಲ್ಲೆಯಲ್ಲಿ ವಿಶ್ವ ಬ್ಯಾಂಕ್ ನೆರವಿನ ಜಲ ನಿರ್ಮಲ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾದ ಬಹುಗ್ರಾಮ ನೀರು ಸರಬರಾಜು ಕಾಮಗಾರಿಗಳ ವಿವರಗಳು ಈ ಕೆಳಗಿನಂತಿವೆ:

1. ಅಗಡಿ ಮತ್ತು ಇತರೆ 7 ಹಳ್ಳಿಗಳು
2. ಬೈರನಪಾದ ಮತ್ತು ಇತರೆ 45 ಹಳ್ಳಿಗಳು
3. ಗುತ್ತಲ್ ಮತ್ತು ಹಾವನೂರು
4. ನೆಗಳೂರು ಮತ್ತು ಇತರೆ 3 ಹಳ್ಳಿಗಳು
5. ಉಪ್ಪಣಸಿ ಮತ್ತು ಇತರೆ 8 ಹಳ್ಳಿಗಳು
6. ಕುದ್ರಿಹಾಳ್ ಮತ್ತು ಇತರೆ 21 ಹಳ್ಳಿಗಳು
7. ಕರ್ಜಗೇರಿ ಮತ್ತು ಇತರೆ 30 ಹಳ್ಳಿಗಳು
8. ದೇವಿಹೊಸೂರು ಮತ್ತು ಇತರೆ 6 ಹಳ್ಳಿಗಳು
9. ಹುರುಳಿಕೊಪ್ಪಿ ಮತ್ತು ಇತರೆ 13 ಹಳ್ಳಿಗಳು

2002–03ನೇ ಸಾಲಿನ ಇಲಾಖಾ ದರಪಟ್ಟಿಗಳ ಆಧಾರದ ಮೇಲೆ ತಯಾರಿಸಲಾದ ಈ ಎಲ್ಲಾ 9 ಯೋಜನೆಗಳ ಒಟ್ಟು ಮೂಲ ಅಂದಾಜು ಮೊತ್ತವು ರೂ.68.00 ಕೋಟಿಗಳಾಗಿತ್ತು. ಈ ಅಂದಾಜುಗಳಿಗೆ ಆಡಳಿತ ಮಂಡಳಿಯು ಡಿಸೆಂಬರ್ 2005 ರಲ್ಲಿ ಅನುಮೋದನೆ ನೀಡಿದ ಮೇರೆಗೆ ಮಾರ್ಚ್–ಜೂನ್ 2006ರ ಅವಧಿಯಲ್ಲಿ ಮೊದಲ ಬಾರಿಗೆ ಈ ಯೋಜನೆಗಳ ಟೆಂಡರುಗಳನ್ನು ಕರೆಯಲಾಗಿತ್ತು. ಈ ಟೆಂಡರ್ ಪ್ರಕ್ರಿಯೆಯಲ್ಲಿ ಕಡಿಮೆ ದರ ಸೂಚಿಸಿದ ಗುತ್ತಿಗೆದಾರರ ದರಗಳನ್ನು ಪರಿಗಣಿಸಿದಾಗ ಈ ಯೋಜನೆಗಳ ಒಟ್ಟು ಮೊತ್ತವು ರೂ.97.16 ಕೋಟಿಗಳಾಗಿತ್ತು.

ಈ ಮೇಲಿನ 9 ಬಹು ಗ್ರಾಮ ನೀರು ಸರಬರಾಜು ಯೋಜನೆಗಳಿಗೆ ಮೊದಲು ಕರೆದಿದ್ದ ಟೆಂಡರ್‌ಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಗುತ್ತಿಗೆದಾರರು ಭಾಗವಹಿಸಿ ಹೆಚ್ಚಿನ ಟೆಂಡರ್ ಪ್ರೀಮಿಯಂ ನಮೂದಿಸಿರುವುದನ್ನು ವಿಶ್ವಬ್ಯಾಂಕ್ ಪರಿಗಣಿಸಿ ನವೆಂಬರ್ 2006 ರಲ್ಲಿ ವಿಶ್ವಬ್ಯಾಂಕ್‌ನಿಂದ ಸೂಚನೆ ಬಂದ ಹಿನ್ನಲೆಯಲ್ಲಿ ಈ ಟೆಂಡರುಗಳನ್ನು ರದ್ದುಗೊಳಿಸಲಾಯಿತು ಹಾಗೂ ವಿಶ್ವಬ್ಯಾಂಕ್ ಸೂಚನೆ ಮೇರೆಗೆ ಮರು ಟೆಂಡರ್ ಮಾಡುವ ಮೊದಲು 7

ಯೋಜನೆಗಳ ಅಂದಾಜುಗಳನ್ನು ಪ್ರಸ್ತುತ ಚಾಲ್ತಿಯಲ್ಲಿದ್ದ ಇಲಾಖಾ ದರಪಟ್ಟಿಗಳು ಹಾಗೂ ಮಾರುಕಟ್ಟೆ ದರಗಳನ್ನು ಅಳವಡಿಸಿ ಪರಿಷ್ಕರಿಸಲಾಯಿತು. ಮತ್ತು ದೇವಿ ಹೊಸೂರು ಮತ್ತು ಹುರಳಿಕೊಪ್ಪಿ ಬಹು ಗ್ರಾಮ ನೀರು ಸರಬರಾಜು ಯೋಜನೆಗಳ ಅಂದಾಜುಗಳನ್ನು ಮರು ಪರಿಶೀಲಿಸಿ ಪರಿಷ್ಕರಿಸಲಾಯಿತು. ಈ ರೀತಿ ಪರಿಷ್ಕರಿಸಲಾದ ಅಂದಾಜುಗಳಂತೆ ಈ ಯೋಜನೆಗಳ ಅಂದಾಜು ಮೊತ್ತವು ರೂ.85.00 ಕೋಟಿಗಳಾಗಿತ್ತು.

ದಿನಾಂಕ 23–12–2006 ರಂದು ನಡೆದ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ಆಡಳಿತ ಮಂಡಳಿಯ 25ನೇ ಸಭೆಯಲ್ಲಿ ಅಗಡಿ, ಗುತ್ತಲ್, ನೆಗಳೂರು, ಉಪ್ಪಣಸಿ, ಕುದ್ರಿಹಾಳ್, ಬೈರನಪಾದ ಮತ್ತು ಕರ್ಲಗೇರಿ ಯೋಜನೆಗಳ ಪರಿಷ್ಕೃತ ಯೋಜನಾ ವರದಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ ಮೇರೆಗೆ ಸಂಬಂಧಿಸಿದ ಬಹು ಗ್ರಾಮ ನೀರು ಸರಬರಾಜು ಯೋಜನೆಗಳ ಜಂಟೀ ಸಮಿತಿಗಳು ಜನವರಿ 2007 ರಿಂದ ಮಾರ್ಚ್ 2007ರ ಅವಧಿಯಲ್ಲಿ 7 ಬಹು ಗ್ರಾಮ ನೀರು ಸರಬರಾಜು ಯೋಜನೆಗಳಿಗೆ ಎರಡನೇ ಬಾರಿ ಟೆಂಡರ್ ಕರೆದಿರುತ್ತಾರೆ. ಈ ಟೆಂಡರ್ ಪ್ರಕ್ರಿಯೆಯಲ್ಲಿ ಬಂದ ದರಗಳ ಮೌಲ್ಯಮಾಪನವನ್ನು ಮಾಡಲಾಗಿದೆ. ಅದಕ್ಕನುಗುಣವಾಗಿ ಈ ಟೆಂಡರುಗಳಲ್ಲಿ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ದರ ಹಾಗೂ ಉಳಿದಂತೆ ಟೆಂಡರು ಕರೆಯಬೇಕಾದ ದೇವಿಹೊಸೂರು ಹಾಗೂ ಹುರಳಿಕೊಪ್ಪಿ ಬಹು ಗ್ರಾಮ ನೀರು ಸರಬರಾಜು ಯೋಜನೆಗಳಿಗೆ ನಿರೀಕ್ಷಿಸಲಾದ ಟೆಂಡರ್ ಪ್ರೀಮಿಯಂ, ವಿದ್ಯುತ್ ಸರಬರಾಜು ಅಂದಾಜು, ರಾಷ್ಟ್ರೀಯ ಹೆದ್ದಾರಿ ಮತ್ತು ರೈಲ್ವೆ ಕ್ರಾಸಿಂಗ್ ಕುರಿತಾದ ವೆಚ್ಚಗಳನ್ನು ಪರಿಗಣಿಸಿದಾಗ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಒಟ್ಟು ರೂ.107.83 ಕೋಟಿಗಳ ಅವಶ್ಯಕತೆ ಇರುತ್ತದೆ.

ಈಗಾಗಲೇ ಎರಡನೇ ಬಾರಿ ಟೆಂಡರ್ ಕರೆಯಲಾದ 7 ಬಹು ಗ್ರಾಮ ನೀರು ಸರಬರಾಜು ಯೋಜನೆಗಳ ಗುತ್ತಿಗೆಗಳನ್ನು ಕಡಿಮೆ ದರ ಸೂಚಿಸಿದ ಅರ್ಹ ಗುತ್ತಿಗೆದಾರರಿಗೆ ವಹಿಸಿಕೊಡಲು ವಿಶ್ವಬ್ಯಾಂಕಿನಿಂದ ನಿರಾಕ್ಷೇಪಣೆ (No Objection) ಪಡೆಯಬೇಕಾಗಿರುತ್ತದೆ. ದಿನಾಂಕ 12–03–2007 ರಂದು ನಡೆದ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ಆಡಳಿತ ಮಂಡಳಿಯ 26ನೇ ಸಭೆಯಲ್ಲಿ

ದೇವಿಹೊಸೂರು ಮತ್ತು ಹುರುಳಿಕೊಪ್ಪಿ ಯೋಜನೆಗಳ ಪರಿಷ್ಕೃತ ವಿಸ್ತೃತ ಯೋಜನಾ ವರದಿಗಳನ್ನು ಅನುಮೋದನೆಗಾಗಿ ಮಂಡಿಸಲಾಗಿತ್ತು. ಆಡಳಿತ ಮಂಡಳಿಯು ಈ ಯೋಜನೆಗಳ ಪರಿಷ್ಕೃತ ವಿಸ್ತೃತ ಯೋಜನಾ ವರದಿಗಳಿಗೆ ಮತ್ತು ಮರು ಟೆಂಡರ್ ಕರೆಯಲು ವಿಶ್ವಬ್ಯಾಂಕ್‌ನಿಂದ ನಿರಾಕ್ಷೇಪಣೆ ಪಡೆಯಲು ಅನುಮೋದನೆ ನೀಡಿರುತ್ತದೆ. ಆದರೆ ಈ ಮೇಲಿನ ಎಲ್ಲಾ 9 ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೊದಲು ಸರ್ಕಾರದಿಂದ ಹೆಚ್ಚುವರಿ ಅನುದಾನಕ್ಕೆ ಅನುಮೋದನೆ ಪಡೆದುಕೊಳ್ಳುವಂತೆ ಆದೇಶ ನೀಡಿರುತ್ತದೆ.

ಈ ಆದೇಶದಂತೆ ದೇವಿಹೊಸೂರು ಮತ್ತು ಹುರುಳಿಕೊಪ್ಪಿ ಯೋಜನೆಗಳ ಕಾಮಗಾರಿಯನ್ನು ಮರುಟೆಂಡರ್ ಮಾಡಲು ವಿಶ್ವಬ್ಯಾಂಕಿನಿಂದ ನಿರಾಕ್ಷೇಪಣೆಯನ್ನು ಕೋರಿ ಪ್ರಸ್ತಾವನೆಯನ್ನು ದಿನಾಂಕ: 30-03-2007 ರಂದು ಕಳುಹಿಸಲಾಗಿದ್ದು, ದಿನಾಂಕ 01-05-2007 ರಂದು ವಿಶ್ವಬ್ಯಾಂಕಿನಿಂದ ನಿರಾಕ್ಷೇಪಣೆ ದೊರೆತಿರುತ್ತದೆ. ಆದರೆ, ಈ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚಿನ ಸಮಯ ಹಾಗೂ ಹೆಚ್ಚುವರಿ ಅನುದಾನ ಅವಶ್ಯಕತೆ ಇರುವ ಕಾರಣ ಟೆಂಡರುಗಳನ್ನು ಕರೆದಿರುವುದಿಲ್ಲ.

ಜಲ ನಿರ್ಮಲ ಯೋಜನೆಯಡಿ ಮೊದಲು ತೆಗೆದುಕೊಳ್ಳಲು ಉದ್ದೇಶಿಸಲಾಗಿದ್ದ 2500 ಯೋಜನೆಗಳ ಗುರಿಗೆ ಎದುರಾಗಿ 3064 ನೀರು ಸರಬರಾಜು ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಜೂನ್ 2005ರ ಮೊದಲೇ ಯೋಜನೆಯ 3ನೇ ಹಂತದ ಕಾಮಗಾರಿಗಳು ಸೇರಿದಂತೆ ಯೋಜನೆಯ ವ್ಯಾಪ್ತಿಯನ್ನು ಅನುಮೋದಿಸಲಾಗಿದ್ದು ಅದರಂತೆ ಕಾಮಗಾರಿಗಳ ವೆಚ್ಚದಲ್ಲಿಯ ಹೆಚ್ಚಳ ಹಾಗೂ ಯೋಜನೆಯ ವ್ಯಾಪ್ತಿ ಹೆಚ್ಚಾದ ಕಾರಣ ಒಟ್ಟಾರೆ ಯೋಜನೆಯ ಗಾತ್ರದಲ್ಲಿ ಹೆಚ್ಚಳವಾಗಿರುತ್ತದೆ. ಈ ಕಾರಣದಿಂದಾಗಿ ಯೋಜನೆಯ ಅಂದಾಜು ಮೊತ್ತವು ರೂ. 929.67 ಕೋಟಿಗಳಿಂದ ರೂ.997.00 ಕೋಟಿಗಳಿಗೆ ಹೆಚ್ಚಲಿದೆ.

ಜೂನ್ 2005 ರಲ್ಲಿ ಸುನಾಮಿ ಪರಿಹಾರ ನಿಧಿಗೆ ಹಣಕಾಸನ್ನು ಒದಗಿಸುವ ಉದ್ದೇಶದಿಂದ ವಿಶ್ವಬ್ಯಾಂಕ್ IDA ನೆರವಿನ 9.948 ಮಿಲಿಯನ್ ಎಸ್‌ಡಿಆರ್ ಕಡಿತಗೊಳಿಸಿದ್ದು, ಇದರಿಂದಾಗಿ IDA ನೆರವಿನ ಮೊತ್ತವು

ರೂ.728.57 ಕೋಟಿಯಿಂದ ರೂ.667.66 ಕೋಟಿಗೆ ಇಳಿಕೆಯಾಗಿರುತ್ತದೆ. ಈ ಇಳಿಕೆ ಮೊತ್ತವಾದ ಸುಮಾರು ರೂ.60.90 ಕೋಟಿಯು ರಾಜ್ಯ ಸರ್ಕಾರದ ಮೇಲೆ ಹೆಚ್ಚುವರಿ ಹೊರೆಯಾಗುತ್ತದೆ.

ಈ ಮೇಲಿನ ಕಾರಣಗಳಿಂದಾಗಿ ಮತ್ತು ಕಾಮಗಾರಿಗಳ ವೆಚ್ಚದಲ್ಲಿಯ ಹೆಚ್ಚಳ ಹಾಗೂ ಯೋಜನೆಯ ವ್ಯಾಪ್ತಿ ಹೆಚ್ಚಾದ ಕಾರಣ ಬಹು ಗ್ರಾಮ ನೀರು ಸರಬರಾಜು ಯೋಜನೆಗಳೂ ಸೇರಿದಂತೆ ಯೋಜಿಸಲಾದ ಎಲ್ಲಾ ಕಾಮಗಾರಿಗಳನ್ನು ತೆಗೆದುಕೊಂಡು ಪೂರ್ಣಗೊಳಿಸಲು ರೂ.136.97 ಕೋಟಿ ಹೆಚ್ಚುವರಿ ಅನುದಾನದ ಅವಶ್ಯಕತೆ ಇರುತ್ತದೆ. ಈ ಕುರಿತು ಪರಿಷ್ಕೃತ ಯೋಜನಾ ವೆಚ್ಚ ಹಾಗೂ ಯೋಜನೆಯ ಅವಧಿಯನ್ನು ಡಿಸೆಂಬರ್ 2008 ರವರೆಗೆ ವಿಸ್ತರಣೆ ಮಾಡಲು ಅನುಮೋದನೆ ಕೋರಿದ್ದು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಅಧ್ಯಕ್ಷರು: ಹಣಕಾಸಿನ ಒಪ್ಪಿಗೆಯನ್ನು ನೀಡಿಲ್ಲವೆಂದು ಸದಸ್ಯರ ಪ್ರಶ್ನೆ.

ಶ್ರೀ ಎಸ್.ಎ.ರವೀಂದ್ರನಾಥ್: ಹೋದ ವಾರ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ಅಧಿಕಾರಿಗಳ ಸಭೆ ಕರೆದು ಜಿಲ್ಲಾ ಮಂತ್ರಿಗಳಾದ ಉದಾಸಿಯವರನ್ನು ಹಾಗೂ ಶಾಸಕರನ್ನು ಕರೆದು ಹೆಚ್ಚಿಗೆ ಆಗುವ ಹಣವನ್ನು ಸರ್ಕಾರ ಕೊಡುತ್ತದೆ ಎನ್ನುವ ಸೂಚನೆಯನ್ನು ಮಾಡಿದ್ದೇವೆ.

ಅಧ್ಯಕ್ಷರು: ನಿಮ್ಮನ್ನು ಸಭೆಗೆ ಕರೆದು ಹೇಳಿದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಶಿವರಾಜ ಸಜ್ಜನರ್: ಜನವರಿ 7ನೇ ತಾರೀಖಿಗೆ ಇದು ಟೆಂಡರ್ ಆಗಿದೆ. ಅದನ್ನು ಇವತ್ತಿನವರೆಗೂ ಟೆಂಡರ್‌ದಾರರಿಗೆ ಒಪ್ಪಿಗೆಯನ್ನು ಕೊಟ್ಟಿಲ್ಲ. ಈಗಾಗಲೇ ಮತ್ತೊಂದು ಹೊಸ S.R.rate ಬಂದಿರುವುದರಿಂದ ಅನೇಕ ಟೆಂಡರ್‌ದಾರರು ಇದು ನಮಗೆ ಒಪ್ಪಿಗೆ ಇಲ್ಲ, ಇದಕ್ಕೆ ಮರು ಟೆಂಡರ್ ಮಾಡಿ ಎಂದು ಪತ್ರವನ್ನು ಕೂಡ ಕೊಡುತ್ತಿದ್ದಾರೆ. ಅದಕ್ಕೆ ದಯವಿಟ್ಟು ತಕ್ಷಣ ಒಂದು ವಾರದೊಳಗಾಗಿ ಯಾರಿಗೆ ಟೆಂಡರ್ ಆಗಿದೆ ಅವರಿಗೆ ಆದೇಶವನ್ನು ಕೊಟ್ಟು ಕಾಮಗಾರಿ ಮಾಡುವಂಥ ವ್ಯವಸ್ಥೆಯಾಗಬೇಕು.

ಇದು 7–8 ತಿಂಗಳಾಯಿತು. ಬೇಗ ಕೊಟ್ಟು ಕೆಲಸವನ್ನು ಪ್ರಾರಂಭ ಮಾಡಬೇಕು.

ಅಧ್ಯಕ್ಷರು: ಆಯಿತು.

**ನಿಯಮ–69ರ ಮೇರೆಗೆ ಸಾರ್ವಜನಿಕ ಮಹತ್ವದ ಚರ್ಚೆ**

(1) ವಿಷಯ: ಮಹಾನಗರ ಪಾಲಿಕೆಯಲ್ಲಿ ಜವಹರಲಾಲ್ ನೆಹರು ರಿನಿವಲ್ ಮೆಷಿನ್‌ದಲ್ಲಿ ಅವ್ಯವಹಾರವಾಗಿರುವ ಬಗ್ಗೆ.

ಶ್ರೀ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಹಾನಗರ ಪಾಲಿಕೆಯಲ್ಲಿ ಜವಾಹರಲಾಲ್ ನೆಹರು ರಿನಿವಲ್ ಮೆಷಿನ್‌ದಲ್ಲಿ ಏನು ಹಣ ಬಂದಿದೆ, ಅದರಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ. ಮೊನ್ನೆ ಮಾನ್ಯ ಪ್ರಧಾನ ಮಂತ್ರಿಗಳು ಕರ್ನಾಟಕದ ಮುಖ್ಯಮಂತ್ರಿಗಳ ಜೊತೆಯಲ್ಲಿ ಮತ್ತು ಮಂತ್ರಿಗಳ ಜೊತೆಯಲ್ಲಿ ಎಲ್ಲಾ ಉನ್ನತ ಮಟ್ಟದ ಅಧಿಕಾರಿಗಳ ಜೊತೆಯಲ್ಲಿ ಮಾತನಾಡತಕ್ಕಂಥ ಕಾಲದಲ್ಲಿ ಜವಾಹರಲಾಲ್ ನೆಹರು ರಿನಿವಲ್ ಮೆಷಿನ್‌ದಲ್ಲಿ ಕೆಲಸ ನಡೆಯುತ್ತಿಲ್ಲ. ಮೈಸೂರಿಗೆ 12000 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಇದನ್ನು ಮಾಡಬೇಕಾದರೆ ಚುನಾಯಿತ ಪ್ರತಿನಿಧಿಗಳು ಇಲ್ಲ ಎನ್ನತಕ್ಕಂಥದು ಒಂದು ವಾದ. ಮತ್ತೊಂದು ಕಡೆ ಏನೆಂದರೆ, storm water drain clean ಮಾಡತಕ್ಕಂಥದ್ದರಲ್ಲಿ ಸಮಿತಿಯ ಒಂದು ವರದಿ ಕೂಡ ಬಂದಿದೆ. ಸಾಕಷ್ಟು ಮಹಾನಗರ ಪಾಲಿಕೆಯಲ್ಲಿ 64 ಕೋಟಿ ರೂ.ಗಳ ಒಂದು ಅವ್ಯವಹಾರವಾಗಿದೆ. ಅದರ ಬಗ್ಗೆ ನಾನು ಮತ್ತು ಡಿ.ಕೆ.ಶಿವಕುಮಾರ್‌ರವರು ಮಾತನಾಡುತ್ತೇವೆ. ಇದರ ಬಗ್ಗೆ ಚರ್ಚೆಯಾಗಬೇಕು.

ಅಧ್ಯಕ್ಷರು: ಇದರಲ್ಲಿ 643 ಕೋಟಿ ರೂ.ಗಳು ಆ ವೆಚ್ಚದಲ್ಲಿ ಎಂದು ಬರೆದಿರುತ್ತೀರಿ.

ಶ್ರೀ ಧರ್ಮಸಿಂಗ್: ಅಲ್ಲಾ. ಅದಕ್ಕಾಗಿ ಈ ವಿಷಯವನ್ನು ಎತ್ತಿದ್ದೇವೆ. ಡಿ.ಕೆ.ಶಿವಕುಮಾರ್‌ವರು ಮಾತನಾಡುತ್ತಾರೆ, ಸಾಕಷ್ಟು ನಮ್ಮಲ್ಲಿ materials ಇವೆ he is very expert of that matter ಅದಕ್ಕಾಗಿ ಅವರಿಗೆ ಚರ್ಚೆ ಮಾಡಲಿಕ್ಕೆ ಅನುಮತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.